**OS- 207/2019 P.W.1**

ದಿನಾಂಕ 15.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲು</u>** : 5 ರಿಂದ 7 ನೇ ಪ್ರತಿವಾದಿಯ ಪರ ವಕೀಲರಿಂದ :-

5 ನೇ ಪ್ರತಿವಾದಿ ನನ್ನ ಅಣ್ಣ. 6 ನೇ ಪ್ರತಿವಾದಿ ನನ್ನ ತಮ್ಮ. 7 ನೇ ಪ್ರತಿವಾದಿ ನನ್ನ ತಾಯಿ. 1 ನೇ ಪ್ರತಿವಾದಿ ನನ್ನ ಸಂಬಂಧಿಕನಲ್ಲ. ನನಗೆ ನಮ್ಮ ತಂದೆ ತಾಯಿ ಕಡೆಯಿಂದ ವಿಭಾಗದ ಮೂಲಕ ಬಂದ ಆಸ್ತಿಗಳಿಗೆ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ. ಆದರೆ ಬೇರೆ ಯಾವುದೇ ಅಸ್ತಿಗಳ ಮೇಲೆ ನಾನು ಈ ದಾವೆಯನ್ನು ಸಲ್ಲಿಸಿರುವುದಿಲ್ಲ. ದಾವಾ ಎ ಶೆಡ್ಯೂಲ್ ಸ್ವತ್ತಿನ ಹೊಸ ಸರ್ವೇ ನಂಬರ್ 60, ಹಳೇ ಸರ್ವೇ ನಂಬರ್ 70. ದಾವಾ ಎ ಶೆಡ್ಯೂಲ್ ಸ್ವತ್ತಿನ ಒಟ್ಟು ವಿಸ್ತೀರ್ಣ ಒಟ್ಟು 10 ಎಕರೆ. ಸದರಿ 10 ಎಕರೆ ಜಮೀನು ನಮ್ಮ ಕುಟುಂಬದಲ್ಲಿ ವಿಭಾಗ ಆಗಿದೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಆದ ವಿಭಾಗದ ಪ್ರಕಾರ 5 ನೇ ಪ್ರತಿವಾದಿಗೆ ದಾವಾ ಎ ಶೆಡ್ಯೂಲ್ ಸ್ವತ್ತಿನಲ್ಲಿ 3 ಎಕರೆ ಜಮೀನು ಹೋಗಿರುತ್ತದೆ. ನನಗೆ 4 ಎಕರೆ ಜಮೀನು ಬಂದಿರುತ್ತದೆ. ನಮ್ಮ ತಾಯಿ, ತಂದೆ ನನ್ನ ತಮ್ಮನಾದ 6 ನೇ ಪ್ರತಿವಾದಿಗೆ ಸೇರಿ 3 ಎಕರೆ ಜಮೀನು ಭಾಗದಲ್ಲಿ ಬಂದಿರುತ್ತದೆ. ನನಗೆ ವಿಭಾಗದ ಮೂಲಕ ಬಂದ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ ಸಣ್ಣರಾಮಣ್ಣ ಮತ್ತು ಮಂಜಣ್ಣ ರವರ ಜಮೀನು, ಉತ್ತರಕ್ಕೆ 6 ಮತ್ತು 7 ನೇ ಪ್ರತಿವಾದಿಯ ಹಾಗೂ ನನ್ನ ತಂದೆಯ ಜಮೀನು, ದಕ್ಷಿಣಕ್ಕೆ ನನಗೆ ಸೇರಿದ ಜಮೀನು ಇದೆ.

5 ನೇ ಪ್ರತಿವಾದಿಗೆ ವಿಭಾಗದಲ್ಲಿ ಬಂದ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸಣ್ಣಯ್ಯ ರವರ ಜಮೀನು, ಉತ್ತರಕ್ಕೆ ರಸ್ತೆ ಹಾಗೂ ಲತಾ ರವರ ಜಮೀನು ಮತ್ತು ದಕ್ಷಿಣಕ್ಕೆ ನನ್ನ ತಾಯಿ, ತಂದೆ ಹಾಗೂ ನೀಲಕಂಠ ರವರಿಗೆ ಸೇರಿದ ಜಮೀನು. ವಿಭಾಗ ಪತ್ರದ ಮೂಲಕ ನನಗೆ ಹಾಗೂ ನನ್ನ ತಮ್ಮಂದಿರಿಗೆ ಬಂದಿರುವ ಆಸ್ತಿಗಳ ಪೂರ್ವಕ್ಕೆ ಉಳ್ಳಿಬಾರೆ ರಸ್ತೆ ಇದೆ ಎಂದರೆ ಸರಿ. ಪ್ರಸ್ತುತ ದಾವೆಯಲ್ಲಿ ನಮ್ಮ ಕುಟುಂಬದಲ್ಲಿ ಆದ ವಿಭಾಗ ಪತ್ರವನ್ನು ಹಾಜರುಪಡಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳಲ್ಲಿ ವಿಭಾಗ ಪತ್ರ ಇರುವುದಿಲ್ಲ. ದಾವಾ ಎ ಶೆಡ್ಯೂಲ್ ಸ್ವತ್ತನ್ನು ರುಜುವಾತುಪಡಿಸಲು ನಾನು ನ್ಯಾಯಾಲಯಕ್ಕೆ ವಿಭಾಗ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ನಾನು ಹಾಜರುಪಡಿಸಬಲ್ಲೆ ಎಂದು ಸಾಕ್ಷ್ಯ ನುಡಿಯುತ್ತಾರೆ. ವಿಭಾಗಪತ್ರದ ಪ್ರಕಾರ ನಮ್ಮೆಲ್ಲರಿಗೂ ದಾಖಲಾತಿ ಆಗಿವೆ ಎಂದರೆ ಸರಿ.

ವಿಭಾಗ ಪತ್ರದ ಮೂಲಕ ನನ್ನ ಹೆಸರಿಗೆ ದಾಖಲಾಗಿರುವ ರೆವಿನ್ಯೂ ದಾಖಲಾತಿಗಳನ್ನು ತಾವು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಾನು ಹಾಜರುಪಡಿಸಿರುವುದಿಲ್ಲ, ಹಾಜರುಪಡಿಸಬಲ್ಲೆ ಎಂದು ನುಡಿಯುತ್ತಾರೆ. ವಿಭಾಗಪತ್ರ ಆದ ನಂತರ ದಾವಾ ಎ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಪೋಡಿ ಆಗಿರುವುದಿಲ್ಲ. ನಮ್ಮ ಕುಟುಂಬದ ಸದಸ್ಯರು ದಾವಾ ಎ ಶೆಡ್ಯೂಲ್ ಸ್ವತ್ತಿಗೆ ಸಂಬಂದಪಟ್ಟಂತೆ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದಾರಾ ಎಂದರೆ ಸಾಕ್ಷಿ ನನ್ನ ಅಣ್ಣ ಅಪೀಲನ್ನು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಅಪೀಲಿನಲ್ಲಿ ತಹಸೀಲ್ದಾರ್ ಗೆ ಮರು ಪೋಡಿ ಮಾಡುವಂತೆ ಜಿಲ್ಲಾಧಿಕಾರಿಗಳು ಆದೇಶ ಮಾಡಿರುತ್ತಾರೆ. ತಹಸೀಲ್ದಾರ್ ಕಚೇರಿಯಿಂದ ದಾವಾ ಎ ಶೆಡ್ಯೂಲ್ ಸ್ವತ್ತಿಗೆ ಪೋಡಿ ಆಗಿದೆಯೇ ಎಂದರೆ ಸಾಕ್ಷಿ ನಾನು ಹಲವಾರು ಬಾರಿ ಹೋಗಿ ತಹಸೀಲ್ದಾರ್ ಗೆ ಕೇಳಿದ್ದರೂ ಸಹ ಪೋಡಿ ಮಾಡಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ವಿಚಾರವನ್ನು ವಾದ ಪತ್ರದಲ್ಲಿ ತಾವೇನಾದರೂ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ನಮೂದುಮಾಡಿದ್ದೇವೆ ಎಂದು ನುಡಿಯುತ್ತಾರೆ.

ದಾವಾ ಬಿ ಶೆಡ್ಯೂಲ್ ಸ್ವತ್ತು ಯಾರಿಗೆ ಸೇರಿದ ಸ್ವತ್ತು ಎಂದರೆ ಸಾಕ್ಷಿ ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ದಾವಾ ಬಿ ಶೆಡ್ಯೂಲ್ ಸ್ವತ್ತು ಸರ್ವೇ ನಂಬರ್ 60 ಕ್ಕೆ ಸೇರಿದ ಸ್ವತ್ತು ಆಗಿರುತ್ತದೆ. ದಾವಾ ಸಿ ಶೆಡ್ಯೂಲ್ ಸ್ವತ್ತು ಯಾರಿಗೆ ಮತ್ತು ಯಾವ ಸರ್ವೇ ನಂಬರ್ ಎಂದರೆ ನನಗೆ ಈಗ ನೆನಪಿಲ್ಲ. ದಾವಾ ಬಿ ಶೆಡ್ಯೂಲ್ ಸ್ವತ್ತು ಯಾರಿಗೆ ಮತ್ತು ಯಾವ ಸರ್ವೇ ನಂಬರ್ ಎಂದರೆ ನನಗೆ ಈಗ ನೆನಪಿಲ್ಲ. ದಾವಾ ಇ ಶೆಡ್ಯೂಲ್ ಸ್ವತ್ತು ಯಾರಿಗೆ ಮತ್ತು ಯಾವ ಸರ್ವೇ ನಂಬರ್ ಎಂದರೆ ನನಗೆ ಈಗ ನೆನಪಿಲ್ಲ. ಕರಕುಚ್ಚಿ ಗ್ರಾಮದ ಸರ್ವೇ ನಂಬರ್ 271 ನಮ್ಮ ಕುಟುಂಬಕ್ಕೆ ಸೇರಿದ ಸ್ವತ್ತು ಅಲ್ಲ. ಸರ್ವೇ ನಂಬರ್ 271 ರಲ್ಲಿ ಒಟ್ಟು ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂಬರ್ 271 ಜಮೀನಿನಲ್ಲಿ ನನಗೆ ಸೇರಿದ ಜಮೀನನ್ನು ತೋರಿಸಲು ರೆವಿನ್ಯೂ ಅಧಿಕಾರಿಗಳು ಪ್ರಯತ್ನ ಪಡುತ್ತಿದ್ದರು ಆದಕಾರಣ ಸದರಿ ಸರ್ವೇ ನಂಬರ್ ಅನ್ನು ಸೇರಿಸಿರುತ್ತೇನೆ. ಸರ್ವೇ ನಂಬರ್ 271 ರ ಜಮೀನು ದಾವಾ ಶೆಡ್ಯೂಲ್ ಸ್ವತ್ತಿನ ಯಾವ ಕಡೆ ಬರುತ್ತದೆ ಎಂದರೆ ಸಾಕ್ಷಿ ಅದು ಯಾವ ಭಾಗದಲ್ಲಿಯೂ ಸಹ ಬರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಇ ಶೆಡ್ಯೂಲ್ ಸ್ವತ್ತಿನಲ್ಲಿ ಸರ್ವೇ ನಂಬರ್ 271 ನ್ನು ನಾವು ನಮೂದು ಮಾಡಿರುವುದಿಲ್ಲ. ದಾವಾ ಇ ಶೆಡ್ಯೂಲ್ ಸ್ವತ್ತಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ಮುಂದುವರೆದು ಅದು ಅಸ್ತಿತ್ವದಲ್ಲಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಸರ್ವೇ ನಂಬರ್ 271 ರ ಸ್ವತ್ತಿನ ಯಾವುದೇ ದಿಕ್ಕಿನಲ್ಲಿ ನನಗೆ ಸೇರಿದ ಯಾವುದೇ ಜಮೀನು ಬರುವುದಿಲ್ಲ. ಸರ್ವೇ ನಂಬರ್ 271 ರ ಜಮೀನಿನ ಯಾವ ಭಾಗದಲ್ಲಿಯೂ ಸಹ 5 ಮತ್ತು 6 ನೇ ಪ್ರತಿವಾದಿಗಳ ಜಮೀನುಹಾಗೂ ರಸ್ತೆ ಬರುವುದಿಲ್ಲ. ಸರ್ವೇ ನಂಬರ್ 271 ರ ಜಮೀನನ್ನು ಈ ದಾವೆಯಲ್ಲಿ ಏಕೆ ಸೇರಿಸಿದ್ದೀರಿ ಎಂದು ಸಾಕ್ಷಿ ನನಗೆ ಸೇರಿದ ಜಮಿನಿನಲ್ಲಿ ಸದರಿ ಜಮೀನಿನ ಹಿಡುವಳಿದಾರರು ದುರಸ್ತಿ ಮಾಡಲು ಬಂದಿರುತ್ತಾರೆ ಆಕಾರಣ ಈ ದಾವೆಯಲ್ಲಿ ಸರ್ವೇ ನಂಬರ್ 271 ಅನ್ನು ಸೇರಿಸಿರುತ್ತೇನೆ. ಸದರಿ ವಿಚಾರವನ್ನು ನಾನು ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ.

ನಮ್ಮ ಕುಟುಂಬದಲ್ಲಿ ಅದ ವಿಭಾಗ ಪತ್ರದಲ್ಲಿ ಸರ್ವೇ ನಂಬರ್ 69 ಅನ್ನು ಸೇರಿಸಿರುವುದಿಲ್ಲ. ಸರ್ವೇ ನಂಬರ್ 69 ಗೆ ಸೇರಿದ ಜಮೀನಿನ ಬಗ್ಗೆ ಯಾವುದಾದರೂ ದಾವೆಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 69 ರ ಪೂರ್ವದ ಕಡೆ ಉರುಳಿಬೋರೆ ಗ್ರಾಮದ ರಸ್ತೆ ಬರುತ್ತದೋ ಇಲ್ಲವೋ ಎಂದರೆ ಸಾಕ್ಷಿ ಬರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಸರ್ವೇ ನಂಬರ್ 271 ರ ಜಮೀನಿನ ಪೂರ್ವದ ಕಡೆ ಉರುಳಿಬೋರೆ ರಸ್ತೆ ಬರುವುದಿಲ್ಲ ಎಂದರೆ ಸರಿ.

ಪ್ರಸ್ತುತ ದಾವೆಯಲ್ಲಿ 2 ಕ್ರಯಪತ್ರಗಳನ್ನು ನಮೂದು ಮಾಡಿದ್ದೀರಿ ಆ ಕ್ರಯಪತ್ರಗಳು ಯಾವುವು ಎಂದರೆ ಒಂದು ಸರ್ವೇ ನಂಬರ್ 271 ಕ್ಕೆ ಸಂಬಂಧಪಟ್ಟಿದ್ದು ಇನ್ನೊಂದು ಸರ್ವೇ ನಂಬರ್ 180 ಕ್ಕೆ ಸಂಬಂಧಪಟ್ಟಿದ್ದಾಗಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ.

ದಿಃ 16.08.2018 ರಲ್ಲಿ ಆಗಿರುವ ಕ್ರಯಪತ್ರವನ್ನು ಪ್ರಶ್ನೆ ಮಾಡಿದ್ದೀರಿ ಸದರಿ ಕ್ರಯಪತ್ರ ಯಾರಿಗೆ ಸೇರಿದ್ದು ಎಂದರೆ ವಿಜಯ್ ಪ್ರಸಾದ್ ಗೆ ಸೆರಿದ್ದು ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವನ್ನು ನಾನು ಹಾಜರುಪಡಿಸಿರುತ್ತೇನೆ. ಸದರಿ ಕ್ರಯಪತ್ರದಲ್ಲಿನಮೂದಾಗಿರುವ ಆಸ್ತಿ ನಮ್ಮ ಕುಟುಂಬಕ್ಕೆ ಸೇರಿದ ಸ್ವತ್ತು ಅಲ್ಲ ಎಂದರೆ ಸರಿ. ಸದರಿ ಕ್ರಯಪತ್ರದಲ್ಲಿ ಇರುವ ಸ್ವತ್ತು ವಿನಯ್ ಪ್ರಸಾದ್ ಗೆ ಯಾವುದರ ಮೂಲಕ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ವಿನಯ್ ಪ್ರಸಾದ್ ಗೆ ರವರಿಂದ 5 ನೇ ಪ್ರತಿವಾದಿ ಖರೀದಿ ಮಾಡಿರುವ ಸ್ವತ್ತು ಎಷ್ಟು ಪ್ರತಿಫಲಕ್ಕೆ

ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ2 ರ ಪ್ರಕಾರ ಪ್ರತಿಫಲ ಎಷ್ಟು ನಮೂದಾಗಿದೆ ಎಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 2 ರಂತೆ ಕ್ರಯವು 15 ಲಕ್ಷಕ್ಕೆ ಆಗಿದೆ ಎಂದರೆ ಸಾಕ್ಷಿ ಆಗಿರಬಹುದು ಎಂದು ನುಡಿಯುತ್ತಾರೆ. 1 ರಿಂದ 4 ನೇ ಪ್ರತಿವಾದಿಗಳು ನೋಂದಾಯಿತ ವಿಭಾಗಪತ್ರವನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ನೋಂದಾಯಿತ ವಿಭಾಗಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿ. ನಿಪಿ1 ರ ವಿಭಾಗಪತ್ರದ ಮೂಲಕ ಡಿ ಶೆಡ್ಯೂಲ್ ಸ್ವತ್ತು 1 ರಿಂದ 4 ನೇ ಪ್ರತಿವಾದಿಯರ ವಿಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ. ಸದರಿ ವಿಭಾಗಪತ್ರದಂತೆ 1 ರಿಂದ 4 ನೇ ಪ್ರತಿವಾದಿಯರ ಹೆಸರಿಗೆ ಖಾತೆ ವರ್ಗಾವಣೆ ಆಗಿದೆ ಎಂದರೆ ಸರಿ. ವಿಜಯ್ ಪ್ರಸಾದ್ ರವರ ಭಾಗಕ್ಕೆ ಬಂದಿರುವ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸುಮ ರವರಿಗೆ ಮಾರಾಟ ಮಾಡುವ ಸಮಯದಲ್ಲಿ ಕ್ರಯಪತ್ರದಲ್ಲಿ ಬೇರೆ ಚಕ್ಕುಬಂದಿ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಿಜಯ್ ಪ್ರಸಾದ್ ರವರು ಸುಮಾ ರವರಿಗೆ ತನಗೆ ಬಂದಿರುವ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಸದರಿ ಸುಮಾ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ನಾನು ಈ ದಾವೆಯಲ್ಲಿ ಸುಮಾ ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಸುಮಾ ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮ ರವರಿಗೆ ಮಾರಾಟ ಮಾಡಿರುವ ಸ್ವತ್ತಿನ ಸರ್ವೇ ನಂಬರ್ 180. ವಸಂತ ರವರು ವಿಜಯ್ ಪ್ರಸಾದ್ ರವರಿಗೆ ಯಾವುದೇ ಸ್ವತ್ತನ್ನು ಮಾರಾಟ ಮಾಡಿಲ್ಲ ಆದರೆ ಅವರ ಹೆಂಡತಿಯ ಹೆಸರಿಗೆ ಮಾರಾಟ ಮಾಡಿರುತ್ತಾರೆ. ವಸಂತ ರವರು ವಿಜಯ್ ಪ್ರಸಾದ್ ರವರಿಗೆ ಯಾವುದಾದರೂ ಸ್ವತ್ತನ್ನು ಮಾರಾಟ ಮಾಡಿದ್ದಾರಾ ಎಂದರೆ ಸಾಕ್ಷಿ ವಿಜಯ್ ಪ್ರಸಾದ್ ರವರಿಗೆ ಯಾವುದೇ ಸ್ವತ್ತು ಮಾರಾಟ ಮಾಡಿಲ್ಲ ಆದರೆ ಸುಮಾ ರವರಿಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸುಮಾ ರವರಿಗೆ ಮಾರಾಟ ಮಾಡಿದ ಚಕ್ಕುಬಂದಿ ನನಗೆ ಈಗ ನೆನಪಿಲ್ಲ. ವಿಜಯ್ ಪ್ರಸಾದ್ ರವರ ಸುಮಾ ರವರಿಗೆ ಮಾರಾಟ ಮಾಡಿರುವ ಸ್ವತ್ತಿನ ಬಗ್ಗೆ ನಾನುನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ.

ದಿಃ 13.08.2018 ರಲ್ಲಿ ಶಿವಣ್ಣ ರವರ ಮಗ ವಸಂತ ರವರಿಗೆ ವಿಜಯ್ ಶಿವಪ್ರಸಾದ್, ಹೇಮಂತಿಣಿ, ನೀಲಂ ಶಿವಪ್ರಸಾದ್, ತೇಜಸ್ವಿನಿ ಶಿವಪ್ರಸಾದ್ ರವರು ಕ್ರಯಪತ್ರವನ್ನು

ಬರೆದುಕೊಟ್ಟಿದ್ದಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ.ದಿಃ 13.08.2018 ರ ಕ್ರಯಪತ್ರದಲ್ಲಿ

ನಮೂದು ಮಾಡಿರುವ ಚಕುಕಬಂದಿ ಪೂರ್ವಕ್ಕೆ ವಸಂತ ರವರಿಗೆ ಸೇರಿದ ಜಮೀನು, ಪಶ್ಚಿಮಕ್ಕೆ ಸಣ್ಣೆಗೌಡ ರವರ ಜಮೀನು, ಉತ್ತರಕ್ಕೆ ಲತಾ ರವರ ಜಮೀನು ಮತ್ತು ದಕ್ಷಿಣಕ್ಕೆ ಸೇರಿದ ವಸಂತ ರವರ ಜಮೀನು.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಾಕಾಶ ಕೋರಿದ್ದು, ನ್ಯಾಯದ ಹಿತದೃಷ್ಟಿಯಿಂದ ಪಾಟೀ ಸವಾಲು ಮಾಡಲು ಕಾಲವಕಾಶವನ್ನು ನೀಡಿ ಮುಂದಿನ ಮುದ್ದತ್ತಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಶಿವಕುಮಾರ್ ಆರ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.